

ಗ್ರ್ಯಾಂಡ್ ಮಾಸ್ಟರ್ ಆದ ಪ್ರಗ್ಗುವನ್ನು ಎತ್ತಿ ಸಂಭ್ರಮಿಸುತ್ತಿರುವ ಶಾಲೆಯ ಗೆಳೆಯರು

## ಕಾಸ್ಪರೋವ್ ಮೆಚ್ಚುಗೆಯ ಮೆಡಲು

ಸಂಕಷ್ಟದ ಗಳಿಗೆಗಳನ್ನು ದೃಢವಾಗಿ ಎದುರಿಸಿ ನಿಂತು, ನ್ಯೂಯಾರ್ಕ್‌ನ ಇಬ್ಬರು ಕೌಬಾಯ್‌ಗಳನ್ನು ಮಣಿಸಿದ ಪ್ರಗ್ಗುವನ್ನು ಮನಸಾರೆ ಶ್ಲಾಘಿಸಿರುವ ಗ್ಯಾರಿ ಕಾಸ್ಪರೋವ್, ಮಗನ ಯಶಸ್ಸಿನ ಯಾನದ ಪ್ರತಿ ಹಂತದಲ್ಲೂ ಜೊತೆಯಾಗಿ ನಿಂತ ತಾಯಿಯನ್ನೂ ಅಭಿನಂದಿಸಿದ್ದಾರೆ. ಚದುರಂಗದ ಚೌಕಗಳಲ್ಲಿನ ಕಾಯಿಗಳು ತಮ್ಮ ಸನ್ನೆಗೆ ತಕ್ಕಂತೆ ಕುಣಿಯುತ್ತಿದ್ದ ದಿನಗಳಲ್ಲಿ, ತನ್ನ ಬೆನ್ನ ಹಿಂದೆ ಅಮ್ಮ ನಿಲ್ಲುತ್ತಿದ್ದ ರಮ್ಯ ಕ್ಷಣಗಳನ್ನು ಮಾಜಿ ಚಾಂಪಿಯನ್ ನೆನಪಿಸಿಕೊಂಡು, ಆ ಹೃದಯಂಗಮ ಕ್ಷಣಗಳನ್ನು ಪ್ರಗ್ಗು ಹಾಗೂ ನಾಗಲಕ್ಷ್ಮಿಯಲ್ಲಿ ಕಂಡಿದ್ದಾರೆ. ಭಾವುಕತೆ ಬೆರೆತ ಗ್ಯಾರಿಯ ಮೆಚ್ಚುಗೆ ಪ್ರಗ್ಗುವಿಗೆ ಎಂದೂ ಮರೆಯಲಾಗದ ಮೆಡಲು.

10 ವರ್ಷದೊಳಗಿನವರ ವಿಭಾಗದಲ್ಲಿ ಚಾಂಪಿಯನ್ ಆಗಿದ್ದ. ಗ್ರ್ಯಾಂಡ್‌ಮಾಸ್ಟರ್ ಆದಾಗ ಸಾಧ್ವಾನಿ ವಯಸ್ಸು 13 ವರ್ಷ 9 ತಿಂಗಳು. ಚೆಸ್ ಇತಿಹಾಸದಲ್ಲಿ 9ನೇ ಅತಿ ಕಿರಿಯ ಜಿಎಂ ಎನ್ನುವ ಅಗ್ಗಳಿಕೆ ಅವನದು.

ಕೇರಳದ ನಿಹಾಲ್ ಸರೀನ್ (ಜನನ: ಜುಲೈ 13, 2004) 14ನೇ ವಯಸ್ಸಿನಲ್ಲಿ 2600 ರೇಟಿಂಗ್ ದಾಟಿದ ಚತುರ. ಆನ್‌ಲೈನ್‌ನಲ್ಲಿ ನಡೆದಿದ್ದ ಹಿಂದಿನ ಚೆಸ್ ಒಲಿಂಪಿಯಾಡ್‌ನಲ್ಲಿ ಚಿನ್ನ ಗೆದ್ದ ಭಾರತ ತಂಡದಲ್ಲಿ ನಿಹಾಲ್ ಆಡಿದ್ದ. 2020ರಲ್ಲಿ ರ್‍ಯಾಪಿಡ್ ಮಾದರಿಯಲ್ಲಿ ನಡೆದಿದ್ದ 18 ವರ್ಷದೊಳಗಿನವರ ವಿಶ್ವ ಯುವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದುಕೊಂಡಿದ್ದು ನಿಹಾಲ್ ಪ್ರಮುಖ ಸಾಧನೆಗಳಲ್ಲೊಂದು.

ಫಿಡೆ ವಿಶ್ವಕಪ್‌ನ ಕ್ವಾರ್ಟರ್ ಫೈನಲ್‌ನಲ್ಲಿ ಪ್ರಗ್ಗುವಿಗೆ ಪ್ರಬಲ ಸವಾಲೆಸೆದ ಅರ್ಜುನ್ ಎರಿಗೇಶಿ (ಜನನ: ಸೆ. 2, 2003) ಹಾಲಿ ರಾಷ್ಟ್ರೀಯ ಸೀನಿಯರ್ ಚಾಂಪಿಯನ್. 2018ರಲ್ಲಿ ಗ್ರ್ಯಾಂಡ್‌ಮಾಸ್ಟರ್ ಪಟ್ಟಕ್ಕೇರಿದ ಅರ್ಜುನ್, ಅಂತರರಾಷ್ಟ್ರೀಯ ಚೆಸ್ ನಕಾಶೆಯಲ್ಲಿ ಭಾರತದ ಭರವಸೆ ಎನ್ನಿಸಿಕೊಂಡಿರುವ ಆಟಗಾರರಲ್ಲೊಬ್ಬರು.

ಸೋಲು ಗೆಲುವಿನ ರೂವಾರಿಯಲ್ಲವೆ? 2019ರಲ್ಲಿನ 'ಚಂದ್ರಯಾನ–2'ರ ವೈಫಲ್ಯದ ಕಹಿಯ ಅನುಭವವನ್ನು 2023ರ 'ಚಂದ್ರಯಾನ–3'ರ ಯಶಸ್ಸು ಮರೆಸಿದೆ. 2023ರ ಫಿಡೆ ವಿಶ್ವಕಪ್‌ನಲ್ಲಿ ಒಂದಿಂಚು ಅಂತರದಲ್ಲಷ್ಟೇ ಎರಡನೆಯವನಾದ ಪ್ರಜ್ಞಾನಂದ, ಮೊದಲಿಗನಾಗುವ ಚಂದಯಾನದ ಅಮೃತಗಳಿಗೆ ಬಹು ದೂರವೇನೂ ಇದ್ದಂತಿಲ್ಲ.

ಆಟಗಾರರಿಗೆ ತರಬೇತಿ ನೀಡುವಲ್ಲಿ 'ಸೆಕೆಂಡ್' ಆಟಗಾರನಾಗಿ (ಕಂಪ್ಯೂಟರ್‌ಗಳ ಮೂಲಕ ಆಟವನ್ನು ವಿಶ್ಲೇಷಿಸಿ ಆಟಗಾರರನ್ನು ಸಜ್ಜುಗೊಳಿಸುವ ತರಬೇತುದಾರ) ಕಾರ್ಯ ನಿರ್ವಹಿಸಿರುವ ಶಿವಮೊಗ್ಗದ ಜಿ.ಎ. ಸ್ಟ್ಯಾನಿ (ಕರ್ನಾಟಕದ ಎರಡನೇ ಗ್ರ್ಯಾಂಡ್ ಮಾಸ್ಟರ್) ಭಾರತದ ಯುವ ಚೆಸ್ಸಿಗರನ್ನು ಹತ್ತಿರದಿಂದ ಬಲ್ಲವರು. "ಈಗಿನ ಈ ಚಾಂಪಿಯನ್ ಹುಡುಗರು ಆಡುವ ರೀತಿ, ಅವರ ಗ್ರಹಿಕೆಯ ವೇಗ, ಆಟವನ್ನು ಅರ್ಥೈಸುವ ರೀತಿ ಬೆರಗು ಮೂಡಿಸುತ್ತದೆ. ಪ್ರಜ್ಞಾನಂದ ಪ್ರತಿಭಾನ್ವಿತ ಆಟಗಾರ. ಆತ್ಮವಿಶ್ವಾಸದಿಂದ ಆಡುತ್ತಾರೆ. ಕ್ರಿಕೆಟ್‌ನಲ್ಲಿ ರಾಹುಲ್ ದ್ರಾವಿಡ್ ಹೇಗೊ, ಹಾಗೆ ಚೆಸ್‌ನಲ್ಲಿ ನಿಹಾಲ್ ಸರೀನ್ ತಾಂತ್ರಿಕವಾಗಿ ಬಲಿಷ್ಠ ಆಟಗಾರ. ಗುಕೇಶ್ ಎಂಥಾ ಪ್ರತಿಕೂಲ ಪರಿಸ್ಥಿತಿಯಿದ್ದಾಗಲೂ ಪುಟಿದೇಳಬಲ್ಲ ಸಮರ್ಥ. ರೌನಕ್ ಸಾಧ್ವಾನಿ ಓಪನಿಂಗ್ ಸಿದ್ಧತೆಗಳಲ್ಲಿ ನಿಪುಣ" ಎಂದು ಹಿಂದೊಮ್ಮೆ 'ಸುಧಾ'ಕ್ಕೆ ನೀಡಿದ ಸಂದರ್ಶನದಲ್ಲಿ ಸ್ಟ್ಯಾನಿ ಅವರು ಹೇಳಿದ ಮಾತು ಭಾರತದ ಚದುರಂಗದ ಚದುರರ ಸಾಮರ್ಥ್ಯದ ಜೊತೆಗೆ ಚೆಸ್‌ನಲ್ಲಿ ಭಾರತದ ಭವಿಷ್ಯವನ್ನೂ ಸೂಚಿಸುವಂತಿದೆ.

ಫಿಡೆ ವಿಶ್ವಕಪ್ ಟ್ರೋಫಿಯನ್ನು ಕೈಯಲ್ಲಿ ಹಿಡಿದ ಸಂಭ್ರಮದಲ್ಲಿ ಮ್ಯಾಗ್ನಸ್ ಕಾರ್ಲ್‌ಸನ್ ಆಡಿದ ಮಾತುಗಳಲ್ಲಿ ಯುವ ಆಟಗಾರರ ಬಗ್ಗೆ ಅಪಾರ ಭರವಸೆಯಿತ್ತು. ಗುಕೇಶ್‌ರನ್ನು ಶಾಸ್ತ್ರೀಯ ಚೆಸ್‌ನ ಪ್ರಬಲ ಆಟಗಾರನೆಂದು ಬಣ್ಣಿಸಿದ ಅವರು, ಪ್ರಜ್ಞಾನಂದನ ಮಾನಸಿಕ ದೃಢತೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. 'ಚೆಸ್‌ನ ಭವಿಷ್ಯ ಸಮರ್ಥರ ಕೈಯಲ್ಲಿದೆ. 1990–1994ರ ಅವಧಿಯಲ್ಲಿ ಜನಿಸಿದ ಆಟಗಾರರು ಚೆಸ್ ನಕಾಶೆಯಲ್ಲಿ ದೀರ್ಘ ಕಾಲದ ಪ್ರಾಬಲ್ಯ ಸಾಧಿಸಿದ್ದಾರೆ. ಈ ಪರಂಪರೆಯನ್ನು 2003ರಲ್ಲಿ ಮತ್ತು ನಂತರ ಜನಿಸಿದ ಯುವ ತಲೆಮಾರು ಸಮರ್ಥವಾಗಿ ಮುಂದುವರೆಸುವ ಸಾಮರ್ಥ್ಯ ಹೊಂದಿದೆ' ಎನ್ನುವ ಕಾರ್ಲ್‌ಸನ್‌ರ ಮಾತುಗಳು 'ಪ್ರಗ್ಗೂ ಗ್ಯಾಂಗ್'ನ ನಾಳೆಗಳ ಸಾಧನೆ–ಸಂಭ್ರಮವನ್ನು ಸೂಚಿಸುವಂತಿವೆ.

### ಕನಸೊಂದು ಶುರುವಾಗಿದೆ...

ಚಂದ್ರಯಾನದ ಮೂಲಕ ಭಾರತೀಯರಲ್ಲಿ ಮೂಡಿರುವ ಸಂಭ್ರಮ ವಿಜ್ಞಾನದ ಬಗ್ಗೆ ಜನಸಾಮಾನ್ಯರಲ್ಲಿ ಆಸ್ಥೆ ಮೂಡುವುದಕ್ಕೆ ಕಾರಣವಾಗಬಹುದೆಂದು ನಿರೀಕ್ಷಿಸುವಂತೆ, ಫಿಡೆ ವಿಶ್ವಕಪ್‌ನಲ್ಲಿ ಪ್ರಜ್ಞಾನಂದ ಸೇರಿದಂತೆ ಭಾರತದ ಆಟಗಾರರು ಮಾಡಿರುವ ಸಾಧನೆ ದೇಶದ ಯುವ ತಲೆಮಾರಿಗೆ ಪ್ರೇರಣೆ ನೀಡುತ್ತದೆಂದು ನಿರೀಕ್ಷಿಸಬಹುದು. ಮುಂದಿನ ದಿನಗಳಲ್ಲಿ ವಿಶ್ವ ಚೆಸ್‌ನ ಶಕ್ತಿಯಾಗಿ ಭಾರತ ಗುರ್ತಿಸಿಕೊಳ್ಳಲಿದೆ ಎಂದು ಚದುರಂಗದ ಪಂಡಿತರು ಹೇಳುತ್ತಿದ್ದಾರೆ. ಆದರೆ, ಪ್ರಜ್ಞಾನಂದ ಮತ್ತು ಗೆಳೆಯರ ಸಾಧನೆಯನ್ನು ಚೆಸ್‌ಗೆ ಮಾತ್ರ ಸೀಮಿತಗೊಳಿಸುವುದು ಸಾಧ್ಯವಿಲ್ಲ. ಈ ಆಟಗಾರರ ಸಾಧನೆ, ಯಾವುದೇ ಕ್ಷೇತ್ರದಲ್ಲಿ ತೊಡಗಿಕೊಂಡಿರುವ ತರುಣ ತರುಣಿಯರು ತಂತಮ್ಮ ಕ್ಷೇತ್ರಗಳಲ್ಲಿ ಅತ್ಯುತ್ತಮ ಹಂತ ಮುಟ್ಟಲಿಕ್ಕೆ ಪ್ರೇರಣೆ ನೀಡುವಂತಿದೆ. ಮಧ್ಯಮವರ್ಗದ ಪ್ರಗ್ಗು ತನ್ನ ಪ್ರತಿಭೆಯಿಂದ ವಿಶ್ವದ ಗಮನಸೆಳೆಯುವುದು ಸಾಧ್ಯವಾಗುವುದಾದರೆ, ಅದು ಕರ್ನಾಟಕದ ಹುಡುಗನಿಗೋ ಹುಡುಗಿಗೋ ಯಾಕೆ ಸಾಧ್ಯವಾಗುವುದಿಲ್ಲ? ಕುಟುಂಬದ ಆರ್ಥಿಕ ಹಿನ್ನೆಲೆಯಷ್ಟೇ ಸಾಧಕನನ್ನು ಸೃಷ್ಟಿಸುವುದಿಲ್ಲ. ಪ್ರತಿಭೆಯೊಂದಿಗೆ ಅಪಾರ ಶ್ರಮ ಹಾಗೂ ತಾಳ್ಮೆ ಸಮೀಕರಣಗೊಂಡಾಗ ಸಾಧಕನೊಬ್ಬ ರೂಪುಗೊಳ್ಳುತ್ತಾನೆ ಎನ್ನುವುದಕ್ಕೆ ಪ್ರಜ್ಞಾನಂದ ಮತ್ತು ಗೆಳೆಯರು ಉದಾಹರಣೆಯಂತಿದ್ದಾರೆ.

ಪ್ರತಿಕ್ರಿಯಿಸಿ: feedback@sudha.co.in